
# ಶ್ರದ್ಧೆ

**ಶ್ರ**ದ್ಧೆ ಎಂದರೆ ಆಸ್ತಿಕ್ಯಬುದ್ಧಿ ಎಂದು ಶಂಕರಾಚಾರ್ಯರು ವರ್ಣಿಸುತ್ತಾರೆ. ಅಂದರೆ 'ಇದೆ, ಇದೆ' ಎಂದು ಯಾವುದೋ ಒಂದರಲ್ಲಿ ವಿಶ್ವಾಸವನ್ನು ಇಡುವುದು. **ಶ್ರದ್ಧಾವಾನ್ ಲಭತೇ ಜ್ಞಾನಂ** – ಶ್ರದ್ಧಾವಂತನು ಜ್ಞಾನವನ್ನು ಪಡೆಯುತ್ತಾನೆ, **ಯೋ ಯಃ ಶ್ರದ್ಧಃ ಸ ಏವ ಸಃ** – ಒಬ್ಬನ ಶ್ರದ್ಧೆ ಹೇಗಿರುತ್ತದೆಯೋ, ಅವನ ವ್ಯಕ್ತಿತ್ವ ಹಾಗಿರುತ್ತದೆ ಎಂದು ಭಗವದ್ಗೀತೆ ಹೇಳುತ್ತದೆ. ಶ್ರದ್ಧೆಗೆ ಮೂರು ಬಗೆಯ ಅರ್ಥವನ್ನು ಮಾಡಬಹುದು – **ವಿಶ್ವಾಸ, ನಂಬಿಕೆ** ಮತ್ತು **ಗೌರವ**. ಇವು ಮೂರೂ ಮಡುಗಟ್ಟಿ ಯಾರ ಮನಸ್ಸಿನಲ್ಲಿ ಇರುತ್ತದೆಯೋ, ಅವನೇ ಶ್ರದ್ಧಾವಂತ. ಅದಲ್ಲದೆ, ಜ್ಞಾನವನ್ನು ಸ್ವೀಕರಿಸಲು ಸಮರ್ಥವಾದ ಮನಃಸ್ಥಿತಿಯನ್ನು ಕೂಡ 'ಶ್ರದ್ಧೆ' ಎಂದು ಕರೆಯಬಹುದು. ಬೆಳೆಯನ್ನು ಬೆಳೆಯುವುದಕ್ಕೆ ಹೊಲವು ಹಸನಾಗಿರಬೇಕು. ಹಾಗೆಯೇ ಗುರುವು ನೀಡುವ ಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಮನಸ್ಸು ಸಂಶಯರಹಿತವಾಗಿ, ವಿಶ್ವಾಸ, ಗೌರವ ಮತ್ತು ನಂಬಿಕೆಗಳಿಂದ ಕೂಡಿರಬೇಕು. ಇದೇ ಶ್ರದ್ಧೆ. ಅಲ್ಲದೆ, ಶ್ರದ್ಧೆಯನ್ನು 'ಸಕಾರಾತ್ಮಕ ಮನಸ್ಥಿತಿ' ಎಂದೂ ಕರೆಯಬಹುದು. **ಯೋ ವಿದ್ಯಯಾ ಕರೋತಿ, ಶ್ರದ್ಧಯಾ ಉಪನಿಷದಾ ಸ ವೀರ್ಯವತ್ತರಂ ಭವತಿ** – ಶ್ರದ್ಧೆ, ವಿದ್ಯೆ ಮತ್ತು ಉಪನಿಷತ್ತುಗಳಿಂದ ಕೂಡಿದ ಕಾರ್ಯವು ವೀರ್ಯವತ್ತರವಾಗುವುದು ಎಂದು ಛಾಂದೋಗ್ಯ ಉಪನಿಷತ್ತು ಹೇಳುತ್ತದೆ. ಇಲ್ಲಿ 'ಶ್ರದ್ಧೆ' ಎಂದರೆ ಸಕಾರಾತ್ಮಕ ಮನೋಭಾವ, 'ವಿದ್ಯೆ' ಎಂದರೆ ಕೈಗೊಂಡ ಕಾರ್ಯದ ಸಂಪೂರ್ಣ ಜ್ಞಾನ, 'ಉಪನಿಷತ್' ಎಂದರೆ ಕಾರ್ಯದಲ್ಲಿ ತನ್ಮಯತೆ.

ನಿಜವಾದ ಭಕ್ತ ಹೇಗಿರುತ್ತಾನೆ? ಇದರ ವಿಶ್ಲೇಷಣೆಯನ್ನು ಶ್ರೀರಾಮಕೃಷ್ಣರು ಹೀಗೆ ಸೊಗಸಾಗಿ ಮಾಡುತ್ತಾರೆ: ನೂರಾರು ವರ್ಷಗಳ ಕಾಲ ಚಕಮಕಿಯ ಕಲ್ಲು ನೀರಿನಲ್ಲಿ ಮುಳುಗಿರುತ್ತದೆ. ಹಾಗಿದ್ದರೂ ಅದು ತನ್ನ ಸ್ವಭಾವವನ್ನು ಕಳೆದುಕೊಳ್ಳುವುದಿಲ್ಲ. ಅದನ್ನು ಕಬ್ಬಿಣದಿಂದ ಅಥವಾ ಮತ್ತೊಂದು ಕಲ್ಲಿನಿಂದ ಹೊಡೆದಾಕ್ಷಣ ಅದು ಕಿಡಿ ಕಾರುವುದು. ಇದರಂತೆಯೇ ಭಕ್ತನಲ್ಲಿ ಇರುವ ಶ್ರದ್ಧೆಯೂ ಅಚಲವಾದುದು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅಂಥವನ ಸುತ್ತಲೂ ಹೀನವಾದ ಪ್ರಾಪಂಚಿಕ ವಸ್ತುಗಳು ಸುತ್ತುವರೆದಿರಬಹುದು. ಆದರೆ ಅವನು ಭಗವಂತನಲ್ಲಿ ಶ್ರದ್ಧೆ ಮತ್ತು ಪ್ರೀತಿಯನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ. ಚಕಮಕಿಯ ಕಲ್ಲು ಕಿಡಿಯನ್ನು ಕಾರುವಂತೆ, ದೇವರ ಹೆಸರನ್ನು ಕೇಳಿದೊಡನೆಯೇ ಅವನು ಉತ್ಸಾಹದಿಂದ ಜಾಗೃತನಾಗುತ್ತಾನೆ.

## ಸರಳತೆ



ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಸಾಧನೆಯಲ್ಲಿ ಶ್ರದ್ಧೆಗೆ ತುಂಬ ಮಹತ್ವವನ್ನು ಕೊಡುತ್ತಾರೆ. ಅವರ ಪ್ರಕಾರ ಮಗುವಿನಲ್ಲಿ ಇರುವ ಶ್ರದ್ಧೆ, ವ್ಯಾಕುಲತೆ ಇದ್ದರೆ ಮಾತ್ರ ದೇವರು ಒಲಿಯುತ್ತಾನೆ. ಅದಕ್ಕೆ ಅವರು ಹೇಳುವ ಈ ಕಥೆ ಎಷ್ಟು ಸಮಂಜಸವಾಗಿದೆ! ಜಟಿಲನೆಂಬ ಹುಡುಗನಿದ್ದನು. ಅವನು ಕಾಡಿನ ದಾರಿಯಲ್ಲಿ ಶಾಲೆಗೆ ಹೋಗಬೇಕಾಗಿತ್ತು. ಆ ದಾರಿಯಲ್ಲಿ ಹೋಗಲು ಅವನಿಗೆ ಭಯವಾಗುತ್ತಿತ್ತು. ಅವನ ತಾಯಿ, "ನೀನು ಏತಕ್ಕೆ ಅಂಜುವುದು, ಮಧುಸೂದನನನ್ನು ಕರೆ" ಎಂದಳು. "ಮಧುಸೂದನ ಯಾರು?" ಎಂದು ಜಟಿಲ ಕೇಳಿದ. "ನಿನ್ನ ಅಣ್ಣ" ಎಂದಳು ತಾಯಿ. ಇದಾದನಂತರ ಒಂದು ದಿನ ಜಟಿಲ ಕಾಡಿನಲ್ಲಿ ಹೋಗುತ್ತಿದ್ದ. ಆಗ ಅವನಿಗೆ ಭಯವಾಯಿತು. "ಅಣ್ಣ, ಮಧುಸೂದನ" ಎಂದು ಕೂಗಿಕರೆದ. ಪ್ರತಿ ಉತ್ತರ ಬರಲಿಲ್ಲ. "ನನ್ನ ಅಣ್ಣ, ಮಧುಸೂದನ, ನೀನು ಎಲ್ಲಿರುವೆ? ನನ್ನ ಹತ್ತಿರ ಬಾ. ನನಗೆ ಅಂಜಿಕೆಯಾಗಿದೆ" ಎಂದ. ದೇವರಿಗೆ ಇನ್ನು ದೂರವಿರಲು ಸಾಧ್ಯವಾಗಲಿಲ್ಲ. ಅವನು ಹುಡುಗನ ಮುಂದೆ ಬಂದು ನಿಂತ. "ನೋಡು, ನಾನು ಇಲ್ಲಿದ್ದೇನೆ. ನೀನೇಕೆ ಹೆದರುವೆ?" ಎಂದ. ಹುಡುಗನನ್ನು ಕಾಡಿನಿಂದ ಹೊರಗೆ ಕರೆದುಕೊಂಡು ಹೋಗಿ ದಾರಿಯನ್ನು ತೋರಿಸಿದ. ಹುಡುಗನನ್ನು ಬೀಳ್ಕೊಡುವಾಗ ಹೇಳಿದ, "ನೀನು ಯಾವಾಗ ಕರೆಯುತ್ತೀಯೋ, ಆಗಲೆಲ್ಲ ನಾನು ಬರುತ್ತೇನೆ. ಭಯಪಡಬೇಡ" ಎಂದು.

ಕರ್ನಾಟಕದಲ್ಲಿ ಕೋಳೂರ ಕೊಡಗೂಸಿನ ಕಥೆ ಪ್ರಸಿದ್ಧವಾಗಿದೆ. ಅದೇ ರೀತಿಯ ಒಂದು ಕಥೆಯನ್ನು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಒಬ್ಬ ಹುಡುಗನ ಮುಗ್ಧಭಕ್ತಿಗೆ ಮೆಚ್ಚಿ ದೇವರು ನೈವೇದ್ಯವನ್ನು ಸ್ವೀಕರಿಸಿದ ಕಥೆ ಅದು. ಈ ಬಗೆಯ ಸರಳತೆ ಒಬ್ಬನನ್ನು ದೇವರ ಸಮೀಪಕ್ಕೆ ಸುಲಭವಾಗಿ ಕರೆದುಕೊಂಡು ಹೋಗುತ್ತದೆ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅದು ಹೇಗೆಂದರೆ, ಕಲ್ಲುಗಳಿಲ್ಲದೆ ಚೆನ್ನಾಗಿ ಉತ್ತ ನೆಲದಲ್ಲಿ ಬಿತ್ತಿದ ಬೀಜ ಬೇಗ ಮೊಳೆತು ಫಲಕ್ಕೆ ಬರುವಂತೆ. ಶ್ರೀರಾಮಕೃಷ್ಣರ ಪ್ರಕಾರ, ಬಹಳ ತಪಸ್ಸಿನ ಪರಿಣಾಮವಾಗಿಯೇ ಜನರು ಧಾರಾಳಿಗಳೂ ಸರಳರೂ ಆಗುತ್ತಾರೆ. ಆದರೆ, ಸರಳತೆಯ ನೆಪದಲ್ಲಿ ಮೂಢರಾಗಬಾರದೆಂಬ ಎಚ್ಚರಿಕೆಯನ್ನೂ ಅವರು ಕೊಡುತ್ತಾರೆ.

ಸರಳತೆಯಿಂದ ಆಧ್ಯಾತ್ಮಿಕ ಉಪದೇಶಗಳು ಫಲಕ್ಕೆ ಬರುತ್ತವೆ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅದಕ್ಕೆ ಒಂದು ಸುಂದರವಾದ ಕಥೆ ಇದೆ. ಒಬ್ಬ ಬ್ರಾಹ್ಮಣ ಪೂಜಾರಿಯಿದ್ದ. ಅವನಿಗೆ ನದಿಯ ಆಚೆಯ ದಡದಿಂದ, ಹಾಲಿನವಳೊಬ್ಬಳು ಹಾಲು ತಂದುಕೊಡುತ್ತಿದ್ದಳು. ದೋಣಿ ತಡವಾಗುತ್ತಿತ್ತು. ಆದ್ದರಿಂದ ಹಾಲು ತರಲು ತಡವಾಗುತ್ತಿತ್ತು. ಒಂದು ದಿನ ಬಹಳ ಹೊತ್ತಾಯಿತು. ಬ್ರಾಹ್ಮಣ ಪೂಜಾರಿ ತುಂಬ ಗದರಿದನು. ಹಾಲಿನವಳು ಕಾರಣ ಹೇಳಿದಳು. ಅದಕ್ಕೆ ಆ ಪೂಜಾರಿಯು, "ಭಗವಂತನ ಹೆಸರನ್ನು ಉಚ್ಚರಿಸಿ ಜನ ಭವಸಾಗರವನ್ನೇ ದಾಟುತ್ತಾರೆ. ಈ ಒಂದು ಸಣ್ಣ ನದಿಯನ್ನು ದಾಟಲಾಗದೇನು?" ಎಂದುಬಿಟ್ಟನು. ಹಾಲು ಮಾರುವವಳು ಸರಳ ಭಕ್ತಿಯುಳ್ಳವಳು. ಅವಳಿಗೆ ಈ ಉಪದೇಶ ಮನಸ್ಸಿಗೆ ಚೆನ್ನಾಗಿ ನಾಟಿತು. ಮಾರನೆಯ ದಿನದಿಂದ ಸರಿಯಾದ ಸಮಯಕ್ಕೆ ಹಾಲು ತರಲು ಆರಂಭಿಸಿದಳು. ಹೀಗೆಯೇ ಹಲವು ದಿನಗಳು ಕಳೆದವು. ಪ್ರತಿದಿನವೂ ಹಾಲುಮಾರುವವಳು ಸಮಯಕ್ಕೆ ಸರಿಯಾಗಿ ಹಾಲು ತಂದುಕೊಡುತ್ತಿದ್ದಳು. "ಇದು ಹೇಗೆ?" ಎಂದು ಬ್ರಾಹ್ಮಣ ಪೂಜಾರಿಯು ಕೇಳಿದನು. "ಪೂಜ್ಯರೇ, ನೀವೇ ಹೇಳಿದಂತೆ ಭಗವಂತನ ಹೆಸರನ್ನು ಹೇಳಿಕೊಳ್ಳುತ್ತ, ನದಿಯ ಮೇಲೆ ನಡೆದುಕೊಂಡು ಬರುತ್ತಿದ್ದೇನೆ" ಎಂದಳು. ಪೂಜಾರಿಗೆ ಇದನ್ನು ನಂಬಲು ಆಗಲಿಲ್ಲ. ಹಾಲಿನವಳು ಪೂಜಾರಿಯನ್ನು ಕರೆದುಕೊಂಡು, ಅದನ್ನು ತೋರಿಸಿಯೇ ಬಿಟ್ಟಳು. ಪೂಜಾರಿಯೂ ಹಾಗೆ ಮಾಡಲು ಹೋದನು. ಆದರೆ ಒದ್ದೆಯಾಗುತ್ತದೆಂಬ ಭಯದಿಂದ ಪಂಚೆಯನ್ನು ಮೇಲಕ್ಕೆ ಕಟ್ಟಿದನು. ಆದರೂ ಮುಳುಗಿಹೋದನು. ಆಗ ಹಾಲಿನವಳು ಹೇಳಿದಳು, "ಗುರುಗಳೇ, ನೀವು ದೇವರ ಹೆಸರನ್ನು ಬಾಯಲ್ಲಿ ಹೇಳುತ್ತಿದ್ದೀರಿ. ಅದೇ ಸಮಯದಲ್ಲಿ ಒದ್ದೆಯಾಗದಿರಲಿ ಎಂದು ಪಂಚೆಯನ್ನು ಮೇಲಕ್ಕೆ ಕಟ್ಟಿರುವಿರಿ. ನೀವು ನಿಜವಾಗಲೂ ಭಗವಂತನ ಮೇಲೆ ಭಾರಹಾಕಿಲ್ಲ." ಶ್ರೀರಾಮಕೃಷ್ಣರು ಹೇಳುತ್ತಾರೆ, "ಯಾವ ಒಂದು ಕೆಲಸವನ್ನು ಸಾಧಿಸಬೇಕಾದರೂ ಭಗವಂತನಲ್ಲಿ ಸಂಪೂರ್ಣ ಶ್ರದ್ಧೆ ಮತ್ತು ಶರಣಾಗತಿ ಇರಬೇಕು" ಎಂದು.

### ಗುರುವಾಕ್ಯದಲ್ಲಿ ಶ್ರದ್ಧೆ

ಯಾವುದೇ ವಿಷಯವನ್ನು ಕಲಿಯುವಾಗ, ಲೌಕಿಕ ವ್ಯವಹಾರದಲ್ಲಿ ಕೂಡ, ನಂಬಿಕೆ ವಿಶ್ವಾಸಗಳು ಅತ್ಯಗತ್ಯ. ನಂಬಿಕೆಯಿಂದ ಕೇಳಿ ತಿಳಿದದ್ದನ್ನು, ಬುದ್ಧಿಯ ಮೂಲಕ ವಿಚಾರ ಮಾಡಬೇಕು. ಆಮೇಲೆ ಅದನ್ನು ತಾನೇ ಕಂಡುಕೊಳ್ಳಲು ಪ್ರಯತ್ನಿಸಬೇಕು. ಇದೇ ಜ್ಞಾನಸಂಪಾದನೆಯ ವಿಧಾನ. ನಂಬಿಕೆಯು ವಿಚಾರವಾಗಿ ಬೆಳೆಯಬೇಕು. ವಿಚಾರವು ಸಾಕ್ಷಾತ್ಕಾರವಾಗಿ ಫಲವೀಯಬೇಕು. ಇದೇ ನಿಜವಾದ ಧರ್ಮದ ಲಕ್ಷಣ. ಇದಕ್ಕೆ ಶ್ರದ್ಧೆ ಬಹು ಮುಖ್ಯ. ಶ್ರದ್ಧೆಯ ವಿವರಣೆಯನ್ನು ಶ್ರೀಶಂಕರಾಚಾರ್ಯರು ತಮ್ಮ 'ವಿವೇಕಚೂಡಾಮಣಿ' ಯಲ್ಲಿ ಬಹು ಸುಂದರವಾಗಿ ಹೀಗೆ ನೀಡುತ್ತಾರೆ: **ಶಾಸ್ತ್ರಸ್ಯ ಗುರುವಾಕ್ಯಸ್ಯ ಸತ್ಯಬುದ್ಧ್ಯಾವಧಾರಣಂ । ಸಾ ಶ್ರದ್ಧಾ ಕಥಿತಾ ಸದ್ಭಿಃ ಯಯಾ ವಸ್ತೂಪಲಭ್ಯತೇ ॥** – "ಶಾಸ್ತ್ರ ಮತ್ತು ಗುರುವಾಕ್ಯಗಳನ್ನು ಸತ್ಯವೆಂಬ ಬುದ್ಧಿಯಿಂದ ಸ್ವೀಕರಿಸುವುದನ್ನೇ ಶ್ರದ್ಧೆಯೆಂದು ವಿದ್ವಾಂಸರು ಕರೆಯುತ್ತಾರೆ. ಇದರಿಂದ ಬ್ರಹ್ಮವಸ್ತುವಿನ ಉಪಲಬ್ಧಿ ಆಗುತ್ತದೆ."

ಗುರುವಾಕ್ಯದಲ್ಲಿ ಶ್ರದ್ಧೆ ಎಷ್ಟು ಮುಖ್ಯ ಎನ್ನುವುದಕ್ಕೆ ಶ್ರೀರಾಮಕೃಷ್ಣರು ಒಂದು ಕಥೆ ಹೇಳುತ್ತಾರೆ. ಅದು ನಮ್ಮ ಕನಕದಾಸರ ಕಥೆಯನ್ನೇ ಹೋಲುತ್ತದೆ. ಒಬ್ಬನು ಸಾಧುಗಳ ಹತ್ತಿರ ಹೋಗಿ, "ನನಗೇನಾದರೂ ಬೋಧನೆ ಮಾಡಿ" ಎಂದನು. ಅದಕ್ಕೆ ಸಾಧು, "ದೇವರನ್ನು ಹೃತ್ಪೂರ್ವಕವಾಗಿ ಪ್ರೀತಿಸು" ಎಂದನು. ಪ್ರಶ್ನೆ ಮಾಡಿದವನು, "ನಾನು ದೇವರನ್ನು ಕಂಡಿಲ್ಲ. ಹೀಗಾಗಿ ಹೇಗೆ ಪ್ರೀತಿಸಲಿ?" ಎಂದನು. ಸಾಧುವು, "ನೀನು ಯಾರನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತೀಯೆ?" ಎಂದನು. ಆಗ ಆ ವ್ಯಕ್ತಿಯು, "ನನ್ನವರೆಂಬುವವರು ಯಾರೂ ಇಲ್ಲ. ನನ್ನದೊಂದು ಕುರಿ ಇದೆ. ಅದನ್ನು ನಾನು ನನ್ನ ಪ್ರಾಣದಂತೆ ಪ್ರೀತಿಸುತ್ತೇನೆ" ಎಂದನು. "ಹಾಗಾದರೆ, ಆ ಕುರಿಯನ್ನು ನಿನ್ನ ಮನಸ್ಸನ್ನೆಲ್ಲ ಇಟ್ಟು ಪ್ರೀತಿಸು. ಆ ಕುರಿಯಲ್ಲಿಯೇ ದೇವರಿದ್ದಾನೆ ಎಂದು ನಂಬು" ಎಂದು ಸಾಧು ಉಪದೇಶಿಸಿದನು. ಅಂದಿನಿಂದ ಆ ವ್ಯಕ್ತಿಯು ಕುರಿಯನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳಲು ಆರಂಭಿಸಿದನು. ದೇವರು ಈ ಕುರಿಯಲ್ಲಿಯೇ ಇದ್ದಾನೆ ಎಂದು ಅಕ್ಷರಶಃ ನಂಬಿದನು. ಕೆಲವು ಕಾಲದ ನಂತರ ಸಾಧುವು ಅದೇ ದಾರಿಯಲ್ಲಿ ಬಂದನು. ಆ ವ್ಯಕ್ತಿಯನ್ನು ತನ್ನ ಸಾಧನೆಯ ಬಗ್ಗೆ ವಿಚಾರಿಸಿದನು. ಆಗ ವ್ಯಕ್ತಿಯು ಸಾಧುವಿಗೆ ನಮಸ್ಕಾರ ಮಾಡಿ ಹೇಳಿದನು,

“ಗುರುಗಳೇ, ಈಗ ನಾನು ಚೆನ್ನಾಗಿದ್ದೇನೆ. ನೀವು ಕೊಟ್ಟ ಬೋಧನೆಗೆ ನಾನು ಎಂದೆಂದಿಗೂ ಋಣಿಯಾಗಿದ್ದೇನೆ. ನೀವು ನೀಡಿದ ಸಲಹೆಯನ್ನು ಅನುಸರಿಸಿ, ಈಗ ನನಗೆ ಒಳ್ಳೆಯದಾಗಿದೆ. ನಾಲ್ಕು ಕೈಗಳುಳ್ಳ ಸುಂದರ ಮೂರ್ತಿಯನ್ನು ಹಲವು ಬಾರಿ ಕಂಡಿದ್ದೇನೆ. ನನಗೆ ಅದರಿಂದ ಪರಮಾನಂದವಾಗಿದೆ.”

## ಶ್ರದ್ಧೆಯ ಅದ್ಭುತ ಪರಿಣಾಮ

ಶ್ರದ್ಧೆ ಹೇಗೆ ಅದ್ಭುತ ಪರಿಣಾಮವನ್ನು ಉಂಟುಮಾಡುತ್ತದೆ ಎನ್ನುವುದನ್ನು ಶ್ರೀರಾಮಕೃಷ್ಣರು ಹೀಗೆ ವಿವರಿಸುತ್ತಾರೆ: “ಯಾವುದಾದರೂ ಒಂದು ಕೆಲಸವನ್ನು ಮಾಡುವುದಕ್ಕೆ ಮುಂಚೆ ಮೂಲಶ್ರದ್ಧೆ ಇರಬೇಕು. ಅದಲ್ಲದೆ ಅದನ್ನು ಕುರಿತು ಚಿಂತಿಸುವಾಗ ಸಂತೋಷವಾಗಬೇಕು. ಆಗ ಮಾತ್ರ ಯಾವುದಾದರೂ ಕೆಲಸ ಮಾಡಲು ಸಾಧ್ಯ” ಎಂದು. ಒಬ್ಬನ ಹೊಲದಲ್ಲಿ ಚಿನ್ನದ ನಾಣ್ಯಗಳು ಇವೆ ಎಂದಿಟ್ಟುಕೊಳ್ಳೋಣ. ಮೊದಲು ಆತನಿಗೆ “ಚಿನ್ನದ ನಾಣ್ಯಗಳು ಇವೆ” ಎಂಬ ಶ್ರದ್ಧೆ ಇರಬೇಕು. ಆಗ, ಅದರ ಬಗ್ಗೆ ಚಿಂತಿಸುತ್ತ, ಸಂತೋಷವಾಗುತ್ತದೆ. ಅನಂತರವಷ್ಟೇ ಅವನು ಅದನ್ನು ತೆಗೆಯುವುದಕ್ಕೆ ಅಗೆಯಲು ಶುರು ಮಾಡುತ್ತಾನೆ. ಮೇಲೆ ಇರುವ ಮಣ್ಣನ್ನು ತೆಗೆಯುತ್ತಿದ್ದಂತೆ ಠಣ್ ಎಂಬ ಶಬ್ದ ಕೇಳಿಸುತ್ತದೆ. ಇದರಿಂದ ಅವನಿಗೆ ಸಂತೋಷ ಹೆಚ್ಚಾಗುತ್ತದೆ. ಅನಂತರ ಕೊಪ್ಪರಿಗೆಯ ಒಂದು ಭಾಗವನ್ನು ನೋಡುತ್ತಾನೆ. ಆಗ ಅವನ ಸಂತೋಷ ಇನ್ನೂ ಹೆಚ್ಚಾಗುತ್ತದೆ. ಹೀಗೆ ಅವನ ಸಂತೋಷ ಅಧಿಕವಾಗುತ್ತಲೇ ಹೋಗುತ್ತದೆ.

ಶ್ರದ್ಧೆ ನಾವು ನೋಡುವ ದೃಷ್ಟಿಯನ್ನೇ ಬದಲಿಸಿಬಿಡುತ್ತದೆ. ಕೃಷ್ಣ ಅರ್ಜುನನಿಗೆ, ಒಮ್ಮೆ ಆಕಾಶದ ಕಡೆಗೆ ತೋರಿಸಿ, “ನೋಡು, ಅಲ್ಲಿ ಎಷ್ಟೊಂದು ಪಾರಿವಾಳಗಳು ಹಾರುತ್ತಿವೆ” ಎಂದನು. ಅರ್ಜುನನು, “ಸ್ನೇಹಿತನೇ, ನಿಜವಾಗಿಯೂ ಅವು ಸುಂದರ ಪಾರಿವಾಳಗಳು” ಎಂದನು. ತಕ್ಷಣವೇ ಶ್ರೀಕೃಷ್ಣನು ಅವುಗಳತ್ತ ಪುನಃ ನೋಡಿ, “ಇಲ್ಲ, ಪಾರಿವಾಳಗಳು ಇಲ್ಲವೇ ಇಲ್ಲ” ಎಂದು ಹೇಳಿದನು. ಅರ್ಜುನ ಕೂಡ ಇನ್ನೊಂದು ಸಲ ಅದನ್ನು ನೋಡಿದನು. “ನಿಜ, ಅವು ಪಾರಿವಾಳಗಳಲ್ಲ” ಎಂದು ಹೇಳಿದನು. ಶ್ರೀರಾಮಕೃಷ್ಣರು ಹೇಳುತ್ತಾರೆ, ಅರ್ಜುನನೇನೂ ಸುಳ್ಳು ಹೇಳುತ್ತಿರಲಿಲ್ಲ; ಅವನಿಗೆ ಕೃಷ್ಣನ ಮಾತಿನಲ್ಲಿ ಎಷ್ಟೊಂದು ಶ್ರದ್ಧೆ ಇತ್ತು ಎಂದರೆ, ಶ್ರೀಕೃಷ್ಣ ಏನೇ ಹೇಳಿದರೂ ಅದನ್ನು ಪ್ರತ್ಯಕ್ಷ ಕಾಣುತ್ತಿದ್ದ. ಶ್ರದ್ಧೆಗೆ ಅಪಾರ ಶಕ್ತಿ ಇದೆ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಸಾಕ್ಷಾತ್ ಭಗವಂತನಾದ ಶ್ರೀರಾಮಚಂದ್ರನು ಲಂಕೆಯನ್ನು ಸೇರಲು ಸಮುದ್ರವನ್ನು ದಾಟುವುದಕ್ಕೆ ಸೇತುವೆಯನ್ನು ಕಟ್ಟಬೇಕಾಯಿತು. ಆದರೆ ಅವನ ಭಕ್ತನಾದ ಹನುಮಂತ, ದೇವರ ಮೇಲಿನ ಶ್ರದ್ಧೆಯ ಬಲದಿಂದ ಒಂದೇ ನೆಗೆತದಲ್ಲಿ ಅಲ್ಲಿಗೆ ಹೋದನು. ಅವನಿಗೆ ಸೇತುವೆ ಕಟ್ಟುವ ಆವಶ್ಯಕತೆಯೇ ಬರಲಿಲ್ಲ.

## ಶ್ರದ್ಧೆಯ ಬಗೆಗಳು

೧. **ಶ್ರದ್ಧೆ ಎಂದರೆ ಒಂದೇ ದೇವರ ರೂಪವನ್ನು ನಂಬುವುದಲ್ಲ.** ನಿಜವಾದ ಭಕ್ತ ಎಲ್ಲವನ್ನೂ ಅಂದರೆ ಸಾಕಾರ, ನಿರಾಕಾರ, ರಾಮ, ಕೃಷ್ಣ, ಭಗವತಿ – ಎಲ್ಲವನ್ನೂ ನಂಬುತ್ತಾನೆ ಎನ್ನುತ್ತಾರೆ ಶ್ರೀರಾಮಕೃಷ್ಣರು. ಇದರ ಸಂಬಂಧ ಒಂದು ತಮಾಷೆಯ ಪ್ರಸಂಗ ಹೇಳುತ್ತಾರೆ. ಅವರು ಕಾಮಾರಪುಕುರಕ್ಕೆ ಹೋಗುತ್ತಿದ್ದಾಗ, ದೊಡ್ಡ ಹುಲ್ಲುಗಾವಲಿನಲ್ಲಿ ಬಿರುಗಾಳಿ ಎದ್ದಿತಂತೆ. ಆಗ ಅವರು ರಾಮ, ಕೃಷ್ಣ, ಭಗವತಿ ಎಂದು ಎಲ್ಲಾ ದೇವರ ಹೆಸರನ್ನೂ ಉಚ್ಚರಿಸಿದರಂತೆ, ಹನುಮಂತನ ಹೆಸರನ್ನೂ ಹೇಳಿಕೊಂಡರಂತೆ. ಹೀಗೆ ‘ನಂಬಿಕೆ’ ಎಂದರೆ ದೇವರ ಎಲ್ಲ ರೂಪಗಳಲ್ಲೂ ವಿಶ್ವಾಸವನ್ನಿಡುವುದು ಎನ್ನುವುದು ಶ್ರೀರಾಮಕೃಷ್ಣರ ಅಭಿಪ್ರಾಯ.

೨. **ನಿಜವಾದ ಭಕ್ತನಾದವನು, ಭಗವನ್ನಾಮದ ಮೇಲೆ ಸಂಪೂರ್ಣ ಶ್ರದ್ಧೆಯನ್ನು ಇಟ್ಟಿರುತ್ತಾನೆ.** ಇದನ್ನು ಎತ್ತಿತೋರಿಸಲು ಶ್ರೀರಾಮಕೃಷ್ಣರು ಒಂದು ಕಥೆಯನ್ನು ಹೇಳುತ್ತಿದ್ದರು: ಒಮ್ಮೆ ರಾಜನೊಬ್ಬ ಬ್ರಾಹ್ಮಣನೊಬ್ಬನ ಹತ್ಯೆ ಮಾಡಿ, ಘೋರಪಾಪಕ್ಕೆ ಒಳಗಾದನು. ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಒಬ್ಬ ಋಷಿಗಳ ಆಶ್ರಮಕ್ಕೆ ಬಂದನು. ಋಷಿಗಳು ಮನೆಯಲ್ಲಿ ಇರಲಿಲ್ಲ. ಅವನ ಮಗ ಇದ್ದ. ದೊರೆಯಿಂದ ವಿಷಯ ತಿಳಿದು, “ಭಗವಂತನ ಹೆಸರನ್ನು ಮೂರು ಬಾರಿ ಉಚ್ಚರಿಸು. ಪಾಪದಿಂದ ಪಾರಾಗುವೆ” ಎಂದು ಅವನು ಹೇಳಿದ. ಋಷಿಗಳು ಹಿಂತಿರುಗಿ ಬಂದರು. ನಡೆದಿದ್ದನ್ನು ಕೇಳಿದ. ಅವರಿಗೆ ಮಗನ ಮೇಲೆ ಬಹಳ ಕೋಪ ಬಂದಿತು. “ಒಮ್ಮೆ ಭಗವಂತನ ನಾಮವನ್ನು ಉಚ್ಚರಿಸಿದರೆ ಸಾಕು. ಅನೇಕ ಕೋಟಿ ಜನ್ಮಗಳಿಂದ ಮಾಡಿದ ಪಾಪವೆಲ್ಲ ಅಳಿಸಿಹೋಗುವುದು. ನೀನೊಬ್ಬ ದಡ್ಡ. ನಿನಗೆ ದೇವರ ಮೇಲೆ ಇರುವ ಶ್ರದ್ಧೆ ಇಷ್ಟೇ ಏನು? ಮೂರು ಬಾರಿ ಭಗವನ್ನಾಮವನ್ನು ಉಚ್ಚಾರ ಮಾಡುವುದಕ್ಕೆ ಹೇಳಿದೆಯಲ್ಲ! ನಿನ್ನಲ್ಲಿರುವ ಶ್ರದ್ಧೆ ದುರ್ಬಲವಾದುದು. ನೀನೊಬ್ಬ ಬೇಸ್ತನಾಗು” ಎಂದು ಶಾಪ ಕೊಟ್ಟರು. ಹೀಗೆ ಶಾಪಗ್ರಸ್ತನಾದ ಮಗನೇ ರಾಮಾಯಣದ ಸಮಯದಲ್ಲಿ ‘ಗುಹಕ’ನಾಗಿ ಜನ್ಮತಾಳಿದ.

೩. **ಸಂಶಯಾತ್ಮಾ ವಿನಶ್ಯತಿ – 'ಸಂಶಯಪಡುವವನು ನಾಶವಾಗುತ್ತಾನೆ'** ಎಂದು ಭಗವದ್ಗೀತೆಯಲ್ಲಿ ಕೃಷ್ಣ ಹೇಳುತ್ತಾನೆ. ಇದನ್ನೇ ರಾಮಾಯಣದ ಪ್ರಸಂಗವೊಂದರ ಮೂಲಕ ಶ್ರೀರಾಮಕೃಷ್ಣರು ಹೀಗೆ ವಿವರಿಸುತ್ತಾರೆ: ಒಬ್ಬ ಸಮುದ್ರವನ್ನು ದಾಟಬೇಕಾಗಿತ್ತು. ವಿಭೀಷಣ ರಾಮನ ಹೆಸರನ್ನು ಒಂದು ಎಲೆಯ ಮೇಲೆ ಬರೆದು ಅವನ ಬಟ್ಟೆಯಲ್ಲಿ ಕಟ್ಟಿದ. "ನೀನು ಈಗ ಯಾವುದಕ್ಕೂ ಹೆದರಬೇಕಾಗಿಲ್ಲಪ್ಪ, ಶ್ರದ್ಧೆಯಿಂದ ಸಮುದ್ರದ ಮೇಲೆ ನಡೆದುಕೊಂಡು ಹೋಗು" ಎಂದು ಹೇಳಿದ. ಆ ಮನುಷ್ಯ ತುಂಬುವಿಶ್ವಾಸದಿಂದ ಸಮುದ್ರದ ಮೇಲೆ ನಡೆದುಕೊಂಡು ಹೋಗುತ್ತಿದ್ದ. ಆದರೆ ಅವನಿಗೆ ಮಾರ್ಗಮಧ್ಯದಲ್ಲಿ, "ವಿಭೀಷಣ ಎಲೆಯ ಮೇಲೆ ಏನು ಬರೆದಿದ್ದಾನೆ" ಎಂದು ಕುತೂಹಲ ಉಂಟಾಯಿತು. ಅದನ್ನು ಬಿಚ್ಚಿ ನೋಡಿದ. ಅದರಲ್ಲಿ ಬರೀ ರಾಮನಾಮವನ್ನು ಬರೆದಿರುವುದನ್ನು ಕಂಡು, "ಇಷ್ಟೇನಾ" ಎಂದುಕೊಂಡ. ಯಾವಾಗ ಅವನ ಮನಸ್ಸಿನಲ್ಲಿ ಈ ಸಂಶಯ ಬಂದಿತೋ, ಆ ಕೂಡಲೇ ಸಮುದ್ರದ ಪಾಲಾದ.

೪. **ತೇನ ವಿನಾ ತೃಣಮಪಿ ನ ಚಲತಿ – ಭಗವಂತನ ಇಚ್ಛೆಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಅಲುಗಾಡದು** ಎಂಬ ಮಾತಿದೆ. ಭಗವಂತನಿಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬ ಪೂರ್ಣನಂಬಿಕೆಯೇ ಶ್ರದ್ಧೆ. ಇದನ್ನು ತಿಳಿಸಿ ಹೇಳುವ ಕತೆಯೊಂದನ್ನು ಶ್ರೀರಾಮಕೃಷ್ಣರು ಹೇಳುತ್ತಿದ್ದರು: ಇಬ್ಬರು ಯೋಗಿಗಳು ತಪಸ್ಸು ಮಾಡುತ್ತಿದ್ದರು. ದೇವರ್ಷಿ ನಾರದರು ಅವರ ಆಶ್ರಮದ ಮುಂದೆ ನಡೆದುಹೋಗುತ್ತಿದ್ದರು. ಅವರು ವೈಕುಂಠದಿಂದ ಬರುತ್ತಿದ್ದರು. ಒಬ್ಬ ಯೋಗಿಯು, "ದೇವರು ವೈಕುಂಠದಲ್ಲಿ ಏನು ಮಾಡುತ್ತಿದ್ದ?" ಎಂದು ಕೇಳಿದ. ಅದಕ್ಕೆ ನಾರದರು, "ಒಂಟೆ ಮತ್ತು ಆನೆಗಳನ್ನು ಸೂಜಿಯ ಕಣ್ಣಿನಲ್ಲಿ ಪೋಣಿಸಿ ಆಡುತ್ತಿದ್ದನು" ಎಂದರು. ಅದಕ್ಕೆ ಯೋಗಿ, "ಇದರಲ್ಲೇನೂ ಆಶ್ಚರ್ಯವಿಲ್ಲ. ಭಗವಂತನಿಗೆ ಅಸಾಧ್ಯವಾದುದು ಯಾವುದೂ ಇಲ್ಲ" ಎಂದ. ಆದರೆ ಇನ್ನೊಬ್ಬ ಯೋಗಿ, "ಅರ್ಥವಿಲ್ಲದ ಮಾತು ಇದು. ನೀನು ವೈಕುಂಠಕ್ಕೆ ಹೋಗೇ ಇಲ್ಲ" ಎಂದು ವಾದಿಸಿದ. ಶ್ರೀರಾಮಕೃಷ್ಣರ ಪ್ರಕಾರ, ಮೊದಲನೆಯವನು ನಿಜವಾದ ಭಕ್ತ, ಅವನಿಗೆ ಸರಳ ಶ್ರದ್ಧೆ ಇದೆ. ಭಗವಂತನನ್ನು ಯಾರೂ ಪೂರ್ಣವಾಗಿ ಅರಿಯಲಾರರು ಎಂಬುದನ್ನು ಅಂಥವನು ಅರಿತಿರುತ್ತಾನೆ ಎನ್ನುತ್ತಾರೆ, ಅವರು.

೫. **ಶ್ರದ್ಧೆಯು ಜೀವನವನ್ನು ಸುಗಮವನ್ನಾಗಿ ಮಾಡುತ್ತದೆ** ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅದಕ್ಕಾಗಿ ರೈಲ್ವೇ ಯಂತ್ರದ ಉದಾಹರಣೆಯನ್ನು ಅವರು ನೀಡುತ್ತಾರೆ. ರೈಲ್ವೇ ಇಂಜಿನ್ ತನಗೆ ಜೋಡಿಸಿದ ಗಾಡಿಗಳನ್ನು ಸುಲಭವಾಗಿ ಎಳೆದುಕೊಂಡು ಹೋಗುತ್ತದೆ. ನಮ್ಮ ಜೀವನವೆಂಬ ಗಾಡಿಯನ್ನು ಎಳೆದುಕೊಂಡು ಹೋಗಲು, ಶ್ರದ್ಧೆ ಮತ್ತು ಭಕ್ತಿಗಳೆಂಬ ರೈಲ್ವೇ ಯಂತ್ರವೇ ಬೇಕು. ಶ್ರದ್ಧೆ ಮತ್ತು ಭಕ್ತಿಗಳಿಂದ ಭಗವಂತನನ್ನು ಪ್ರೀತಿಸುವವರಿಗೆ, ಎಷ್ಟೇ ಕಷ್ಟ ಬರಲಿ, ಆತಂಕಗಳು ಬರಲಿ, ಜೀವನ ಸಾಗಿಸುವುದು ಕಷ್ಟವಾಗಿ ತೋರುವುದಿಲ್ಲ. ಆ ಶ್ರದ್ಧಾಭಕ್ತಿಗಳೇ ಕಾಲಾಂತರದಲ್ಲಿ ಅವರನ್ನು ಭಗವಂತನ ಕಡೆಗೆ ಕರೆದುಕೊಂಡು ಹೋಗುವುದು.

ಹಾಗೆಂದೇ ಪ್ರಪಂಚದಲ್ಲಿ ಇರುವವರಿಗೆ ಶ್ರೀರಾಮಕೃಷ್ಣರು ಹೀಗೆ ಬೋಧಿಸುತ್ತಾರೆ: **"ಎಲ್ಲವನ್ನೂ ನೀವು ದೇವರಿಗೆ ಬಿಟ್ಟುಬಿಡಿ. ಅವನಲ್ಲಿ ಶರಣಾಗತರಾಗಿ. ಎಲ್ಲವೂ ಅವನ ಇಚ್ಛೆಯಿಂದ ನಡೆಯುವುದೆಂದು ನಿಮಗೆ ಆಗ ಗೊತ್ತಾಗುವುದು."** •

## ಶ್ರೀರಾಮಕೃಷ್ಣ ಸಂಭಾಷಣ ಸುಧೆ

**ಒಬ್ಬ ಭಕ್ತ : "ಮಹಾಶಯರೇ, ದುಷ್ಟ ನಮಗೆ ಕೇಡು ತರಲು ಉದ್ಯುಕ್ತನಾಗಿದ್ದರೂ ಅಥವಾ ತಂದೇಬಿಟ್ಟರೂ ನಾವು ಕೈಕಟ್ಟಿ ಸುಮ್ಮನೆ ಕುಳಿತಿರಬೇಕೇ?"**

**ಶ್ರೀರಾಮಕೃಷ್ಣರು :** "ಸಮಾಜದ ಮಧ್ಯೆ ಇರಬೇಕಾದರೆ ದುಷ್ಟರ ಕೈಯಿಂದ ತಪ್ಪಿಸಿಕೊಳ್ಳಲು ಮನುಷ್ಯ ಸ್ವಲ್ಪ ರಜೋಗುಣವನ್ನು ಪ್ರದರ್ಶಿಸಬೇಕಾಗುತ್ತದೆ. ದುಷ್ಟರ ಕಡೆ ಬುಸುಗುಟ್ಟಬೇಕು. ಕೇಡು ತರದೆ ಇರಲೆಂದು ಅವರಿಗೆ ಭಯ ತೋರಿಸಬೇಕು. ಅವರ ಮೇಲೆ ವಿಷ ಕಾರಬಾರದು; ಅನಿಷ್ಟ ತರಬಾರದು. ಭಗವಂತನ ಸೃಷ್ಟಿಯಲ್ಲಿ ಹಲವಾರು ವಿಧದ ಜೀವ, ಜಂತು, ಮರ, ಗಿಡ ಇವೆ. ಪ್ರಾಣಿಗಳಲ್ಲಿ ಒಳ್ಳೆಯವೂ ಇವೆ, ಕೆಟ್ಟದ್ದೂ ಇವೆ... ಅದೇ ರೀತಿಯಾಗಿ ಮನುಷ್ಯರಲ್ಲಿ ಒಳ್ಳೆಯವರೂ, ಕೆಟ್ಟವರೂ, ಸಾಧು, ಅಸಾಧು ಎಲ್ಲರೂ ಇದ್ದಾರೆ; ಸಂಸಾರಾಸಕ್ತರೂ ಇದ್ದಾರೆ, ಭಕ್ತರೂ ಇದ್ದಾರೆ."

**ಒಬ್ಬ ಭಕ್ತ :** ಮಹಾಶಯರೇ, ಹಾಗಾದರೆ ಈ ವಿಧದ ಪ್ರಾಪಂಚಿಕ ಜೀವರ ಉದ್ಧಾರಕ್ಕೆ ಯಾವ ಮಾರ್ಗವೂ ಇಲ್ಲವೇ?

**ಶ್ರೀರಾಮಕೃಷ್ಣರು:** "ನಿಶ್ಚಯವಾಗಿಯೂ ಇದೆ. ಆಗಾಗ ಸಾಧುಸಂಗ, ಆಗಾಗ ನಿರ್ಜನ ಪ್ರದೇಶದಲ್ಲಿ ಭಗವಚ್ಚಿಂತನೆ ಮಾಡುತ್ತಿರಬೇಕು. ಆತನನ್ನು ಪ್ರಾರ್ಥಿಸಬೇಕು: "ನನಗೆ ಶ್ರದ್ಧಾಭಕ್ತಿ ಕೊಡು" ಎಂಬುದಾಗಿ. ಶ್ರದ್ಧೆಯುಂಟಾಗಿಬಿಟ್ಟಿತು ಎಂದರೆ ಎಲ್ಲವೂ ದೊರೆತ ಹಾಗೆ. ಶ್ರದ್ಧೆಗಿಂತ ಮಿಗಿಲಾದದ್ದು ಯಾವುದೂ ಇಲ್ಲ." (ಸಂಗ್ರಹ : ಕುಮಾರಿ ಸ್ವರ್ಣಗೌರಿ)